# ಮನಸೆಳೆಯುವ ಆರ್ಕಿಡ್ ಲೋಕ

■ ಚಿತ್ರ– ಬರಹ:
**ಜೆಸ್ಸಿ ಪಿ.ವಿ.**







ಮಳೆಗಾಲದ ಆರಂಭದಲ್ಲಿ ಕಾಡಿನ ಕಡೆಗೆ ಹೋದರೆ 'ಸೀತೆ ಹೂ', 'ದ್ರೌಪದಿ ಮಾಲೆ' ಇತ್ಯಾದಿ ಹೆಸರುಗಳಿಂದ ಕರೆಯಲ್ಪಡುವ ಗುಲಾಬಿ ಬಣ್ಣದ ಹೂಗೊಂಚಲು ಕಣ್ಣಿಗೆ ಬೀಳುತ್ತದೆ. ಅದೊಂದು ಆರ್ಕಿಡ್ ಹೂ. ಅಂಟಾರ್ಕ್‌ಟಿಕಾವನ್ನು ಹೊರತುಪಡಿಸಿ, ಉಳಿದಂತೆ ಪ್ರಪಂಚದ ಎಲ್ಲೆಡೆಗಳಲ್ಲಿ ಕಂಡು ಬರುವ ಆರ್ಕಿಡ್‌ನ ಒಟ್ಟು 880 ಪ್ರಬೇಧಗಳಲ್ಲಿ ಎರಡೂವರೆ ಲಕ್ಷದಷ್ಟು ಉಪಪ್ರಬೇಧಗಳಿವೆ. ಐಸ್ ಕ್ರೀಂ, ಕೇಕ್ ಇತ್ಯಾದಿಗಳಲ್ಲಿ ಪರಿಮಳ ಹಾಗೂ ರುಚಿಗಾಗಿ ಬಳಸುವ 'ವೆನಿಲ್ಲಾ' ಕೂಡಾ ಒಂದು ಜಾತಿಯ ಆರ್ಕಿಡ್.

ಆರ್ಕಿಡ್ ಹೂಗಳು ಅತ್ಯಂತ ಆಕರ್ಷಕವಾಗಿದ್ದು, ವಿವಿಧ ಬಣ್ಣಗಳನ್ನು ಹೊಂದಿರುತ್ತವೆ. ಅರಳಿದ ನಂತರ ಬಹುದಿನಗಳವರೆಗೆ ಬಾಡದೆ, ಉದುರದೆ, ಬಣ್ಣ ಮಾಸದೆ, ಫ್ರೆಶ್ ಆಗಿ ಕಾಣುವ ಕಾರಣ ಹೂಗುಚ್ಛಗಳನ್ನು ಮಾಡಲು, ಹೂದಾನಿಗಳಲ್ಲಿ ಇಡಲು ಇವು ಹೆಚ್ಚಾಗಿ ಬಳಕೆಯಾಗುತ್ತವೆ. 'ಆರ್ಚಿಡೆಸಿಯಾ' ಕುಟುಂಬಕ್ಕೆ ಸೇರಿದ  ಆರ್ಕಿಡ್ ಗಳು ಉದ್ಯಾನಗಳಿಗೂ ಹೆಚ್ಚು ಮೆರುಗು ತರುತ್ತವೆ.

ಆರ್ಕಿಡ್‌ಗಳಿಗೆ ಹೆಚ್ಚೇನೂ ಆರೈಕೆ ಅಗತ್ಯವಿಲ್ಲ. ಕಡಿಮೆ ನೀರು ಸಾಕು. ತೆಂಗಿನಕಾಯಿಯ ಹೊರಗಿನ ನಾರಿನ ಚಿಪ್ಪುಗಳ ಮಧ್ಯೆ ಮಣ್ಣು ತುಂಬಿಸಿ ಆರ್ಕಿಡ್ ನೆಟ್ಟು ಹಗ್ಗದಲ್ಲಿ ಆ ಚಿಪ್ಪನ್ನು ನೇತು ಹಾಕಿದರೆ ಆರ್ಕಿಡ್ ಚೆನ್ನಾಗಿ ಬೆಳೆಯುತ್ತದೆ. ವಾತಾವರಣದಲ್ಲಿರುವ ತೇವಾಂಶವನ್ನು ಹೀರಿಕೊಳ್ಳಲು ಅದರಲ್ಲಿ ಒಂದು ಜಾತಿಯ ಬೇರುಗಳಿವೆ. ಆ ಕಾರಣದಿಂದ ಅವಕ್ಕೆ ನೀರು ಹಾಕದಿದ್ದರೂ ಬೇಗ ಒಣಗಿ ಹೋಗುವುದಿಲ್ಲ.

ಆರ್ಕಿಡ್ ಹೂಗಳ ವಿಚಿತ್ರ ವಿನ್ಯಾಸದಿಂದಾಗಿ ಅವುಗಳಿಗೆ ವಿಚಿತ್ರ ಹೆಸರುಗಳೂ ಬಂದಿವೆ. ಡ್ಯಾನ್ಸಿಂಗ್ ಗರ್ಲ್, ಲೇಡೀಸ್ ಸ್ಲಿಪ್ಪರ್, ಬಟರ್ ಫ್ಲೈ, ಮಂಕಿ ಫೇಸ್, ಬೀ ಆರ್ಕಿಡ್, ಫ್ಲೈಯಿಂಗ್ ಡಕ್, ಸ್ವಾತೋಗ್ಲೋಟಿಸ್– ಹೀಗೆ ಹೆಸರುಗಳು ಗಮನ ಸೆಳೆಯುತ್ತವೆ. ಹೊಳಪು ಮತ್ತು ವೈವಿಧ್ಯಮಯ ಬಣ್ಣಗಳಿಂದ ಈ ಹೂಗಳು ಎಂತಹವರನ್ನೂ ಮೋಡಿ ಮಾಡುತ್ತವೆ. ಪಿಂಕ್(ಗುಲಾಬಿ) ಆರ್ಕಿಡ್ ವಾತ್ಸಲ್ಯವನ್ನು ಸಾಂಕೇತಿಸಿದರೆ ಬಿಳಿ ಆರ್ಕಿಡ್ ಪರಿಶುದ್ಧತೆಯನ್ನು, ಕೆಂಪು ಆರ್ಕಿಡ್ ಪ್ರೀತಿ ಮತ್ತು ಹೊಂದಾಣಿಕೆಯನ್ನೂ ಹಾಗೂ ಹಳದಿ ಬಣ್ಣ ಫಲವತ್ತತೆಯನ್ನು ಪ್ರತಿನಿಧಿಸುತ್ತವೆ.

ರಫ್ತಾಗುವ ವಾಣಿಜ್ಯ ಪುಷ್ಪಗಳಲ್ಲಿ ಆರ್ಕಿಡ್ ಮುಂಚೂಣಿಯಲ್ಲಿದೆ. ಬಹುತೇಕ ಎಲ್ಲಾ ಋತುಗಳಲ್ಲೂ ಈ ಪುಷ್ಪಗಳು ಅರಳುವ ಕಾರಣ ಉದ್ಯಾನಗಳಲ್ಲಿ ಆರ್ಕಿಡ್‌ಗೆ ಅಗ್ರಸ್ಥಾನವಿದೆ. ಹೂವಿನ ಕುಂಡಗಳಲ್ಲೂ ಆರ್ಕಿಡ್ ಅನ್ನು ಬೆಳೆಸಬಹುದು. ಗಿಡದಲ್ಲಿ ಹುಟ್ಟಿಕೊಳ್ಳುವ ಮರಿಗಿಡವನ್ನು ಬೇರ್ಪಡಿಸಿ ನೆಟ್ಟು ಹೊಸ ಗಿಡವನ್ನು ಪಡೆಯಬಹುದು. ಕೆಲವು ಆರ್ಕಿಡ್‌ಗಳಲ್ಲಿ ಗೆಡ್ಡೆಯಂತಹ ರಚನೆಯಿದ್ದು ಅವನ್ನು ನೆಟ್ಟು ಹೊಸ ಗಿಡ ಮಾಡಬಹುದು. ಮರಳು ಮಿಶ್ರಿತ ಮಣ್ಣು ತುಂಬಿಸಿ ಗಿಡ ನೆಟ್ಟು, ಹೆಂಚಿನ ತುಂಡುಗಳು, ತೆಂಗಿನ ಚಿಪ್ಪು ಇತ್ಯಾದಿಗಳನ್ನು ಬುಡದಲ್ಲಿ ಹರಡಿ ಅಲ್ಪ ಪ್ರಮಾಣದ ನೀರು ಹಾಕುವ ಮೂಲಕ ಗಿಡವನ್ನು ಪೋಷಿಸಬಹುದು.